ವಿಶ್ವವಾಣಿ

## ಸಂಪಾದಕೀಯ

# ಬಂದ್ ಶಾಂತಿಯುತವಾಗಿರಲಿ

ನಮ್ಮ ನಾಡಿಗೆ ಮತ್ತೊಮ್ಮೆ ಬಂದ್ ಬಿಸಿ ತಟ್ಟಿದೆ. ಕರೋನಾ ಸೋಂಕಿನ ವ್ಯಾಪಕ ಸಾಧ್ಯತೆಯ ನಡುವಿನಲ್ಲೇ, ರೈತರ ಹೋರಾಟದ ಹಿನ್ನೆಲೆಯಲ್ಲಿ ಕರ್ನಾಟಕ ಬಂದ್‌ಗೆ ಹಲವು ಸಂಘಟನೆಗಳು ಕರೆಕೊಟ್ಟಿವೆ. ನಮ್ಮ ದೇಶದ ಬೆನ್ನೆಲುಬು ಎನಿಸಿರುವ ರೈತರ ಹಿತರಕ್ಷಣೆಯನ್ನು ಕಾಪಾಡಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ವಿಫಲವಾಗಿವೆ ಎಂದು ಆರೋಪಿಸಿರುವ ವಿರೋಧ ಪಕ್ಷಗಳು ಮತ್ತು ಕೆಲವು ರೈತ ಸಂಘಟನೆಗಳು ಬೆಂಗಳೂರು ಬಂದ್ ಮಾಡಲು ಕರೆ ಕೊಡುವ ಮೂಲಕ ಈ ಒಂದು ವಿವಾದವನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಿದ್ದಾರೆ. ನಮ್ಮ ದೇಶದ ರೈತರು ಅವಕಾಶ ವಂಚಿತರು. ಬೆವರು ಸುರಿಸಿ ಬೆಳೆ ಬೆಳೆದರೂ, ಮಾರಾಟ ಮಾಡಲು ಮುಕ್ತವಾದ ಅವಕಾಶವಿಲ್ಲದ ಕಾರಣ, ಮಧ್ಯವರ್ತಿಗಳನ್ನು ಅವಲಂಬಿಸುವ ಅನಿವಾರ್ಯತೆ. ತೋಟಗಾರಿಕೆ ಬೆಳೆಯೇ ಆಗಲಿ, ಆಹಾರ ಧಾನ್ಯವೇ ಆಗಿರಲಿ, ಅದನ್ನು ಮಾರಿ ಹಣ ಗಳಿಸಬೇಕೆಂದರೆ, ರೈತರು ಮಧ್ಯವರ್ತಿಗಳ ಹಿಡಿತದಲ್ಲಿ ಸಿಕ್ಕಿ ನರಳಾಡುವ ಸ್ಥಿತಿ ಇದೆ. ಅಚ್ಚರಿಯ ವಿಷಯವೆಂದರೆ, ರೈತನನ್ನು ಅಸಹಾಯಕನನ್ನಾಗಿಸುವ ಈ ಪದ್ಧತಿಯು ನೂರಾರು ವರ್ಷಗಳಿಂದಲೂ ನಮ್ಮ ದೇಶದಲ್ಲಿದೆ ಮತ್ತು ಅದನ್ನು ಬದಲಿಸಿ, ರೈತರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಲು ಹೆಚ್ಚಿನ ಪ್ರಯತ್ನ ನಡೆದಿಲ್ಲ. ಈಗ ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಕೃಷಿ ಕ್ಷೇತ್ರದಲ್ಲಿ ಹೊಸ ಗಾಳಿ ಬೀಸಲು ಅನುವಾಗುವಂತೆ ನಿಯಮಾವಳಿಗಳನ್ನು ರೂಪಿಸಿವೆ. ಆದರೆ ಈ ಹೊಸ ನಿಯಮಗಳು ರೈತನನ್ನು ರಕ್ಷಿಸುವ ಬದಲು ಶೋಷಿತ್ತವೆ ಎಂಬುದೇ ವಿರೋಧ ಪಕ್ಷಗಳ ಮತ್ತು ಹಲವು ಚಿಂತಕರ ವಾದ. ಅದರ ಹಿನ್ನೆಲೆಯಲ್ಲಿ ಇಂದು ಬಂದ್‌ಗೆ ಕರೆ ನೀಡಲಾಗಿದೆ. ಅದೇನಿದ್ದರೂ, ರೈತರ ಬಂದ್ ಸಮಯದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಿರಲಿ, ಪ್ರತಿಭಟಿಸುವ ಹಕ್ಕು ಹಿಂಸೆಯ ಹಾದಿ ಹಿಡಿಯದಿರಲಿ ಎಂದು ಆಶಿಸುವುದು ಜನಸಾಮಾನ್ಯನ ಅನಿವಾರ್ಯತೆ ಎನಿಸಿದೆ.

## ಸೊಂಪಾದಕೀಯ

# ಇಲ್ಲಿ ಕಾಸು ಕೊಟ್ಟವನೇ ಗೌಡಾ

ಟ್ರೇನ್ ರಿಸರ್ವೇಶನ್ ಮಾಡಿಸಲು ಫಾರ್ಮ್ ತುಂಬುವಾಗ ಅದರಲ್ಲಿ ನೀವು ವೈದ್ಯರಾಗಿದ್ದರೆ ನಮೂದಿಸಿ ಎಂದಿರುತ್ತದೆ. ತುರ್ತು ಸಂದರ್ಭದಲ್ಲಿ ಪ್ರಯಾಣಿಕರನ್ನು ಉಪಚರಿಸಲು ಅನುಕೂಲ ವಾಗಲಿ ಎಂಬ ಉದ್ದೇಶ. ಅವರೇನೋ ಡಾ.... ಎಂದು ಬರೆದುಕೊಳ್ಳುತ್ತಾರೆ ಬಿಡಿ. ಆದರೆ ಇನ್ನೊಂದು ವರ್ಗದ ಡಾಕ್ಟರ್‌ಗಳೂ ಇದ್ದಾರೆ. ಅವರೇ ಪಿಎಚ್.ಡಿ ಡಾಕ್ಟರು. ಅಂದರೆ ಡಾಕ್ಟರ್ ಆಫ್ ಫಿಲಾಸಫಿ ಪದವಿ ಪಡೆದವರು. ಈ ಕಾಯಿಲೆ ಗುಣಪಡಿಸೋ ಡಾಕ್ಟರು ಹಾಗೂ ಪಿಎಚ್.ಡಿ ಡಾಕ್ಟರು ಇಬ್ಬರೂ ತಮ್ಮ ಹೆಸರಿನ ಹಿಂದೆ ಡಾ. ಎಂದು ನಮೂದಿಸುವುದರಿಂದ ಜನರಿಗೆ ಬಲೇ ಕನ್ಫ್ಯೂಷನ್ನು. ಇವರ ನಡುವೆ ಗೌರವ ಡಾಕ್ಟರೇಟ್ ಪಡೆದವರೂ (ಗೌಡಾ) ಇರುತ್ತಾರೆ. ಈ ತ್ರಿಮೂರ್ತಿಗಳಲ್ಲಿ ಯಾರು ಯಾವ ಡಾಕ್ಟರು ಎಂಬುದೇ ಗೊತ್ತಾಗದು. ಅದರಲ್ಲೂ ಈ ಗೌಡಾಗಳ ಹಾವಳಿ ಈಚೆಗೆ ವಿಪರೀತವಾಗಿದೆ. ಗೌರವ ಡಾಕ್ಟರೇಟ್ ಪಡೆದುಕೊಂಡು ತಮ್ಮ ಹೆಸರಿನ ಹಿಂದೆ ಡಾ. ಎಂದು ದೊಡ್ಡದಾಗಿ ಬರೆದುಕೊಳ್ಳಲು ಕೆಲವರಿಗೆ ಅದೇನೋ ಖುಷಿ, ಈ ತುರುಪು ತೊಡಲು ಅದೆಂಥದೋ ಹುರುಪು. ಹೀಗಾಗಿ ಡಾ. ಎಂದು ಪ್ರಿಫಿಕ್ಸ್ ಹೊಂದಲು ಅನೇಕರು ಹಾತೊರೆಯುವುದು, ಹಲುಬುವುದು, ಹಂಬಲಿಸುವುದು. ಹಾಂ. ಆದರೆ ಪ್ರಿಫಿಕ್ಸ್‌ನಲ್ಲಿ ಎಲ್ಲೋ ಫಿಕ್ಸ್ ಥರ ಕೇಳುತ್ತದೆಯಲ್ಲ ಎನ್ನದಿರಿ. ಈಗೀಗ ಅವೆಲ್ಲವೂ ಬಹುತೇಕ ಫಿಕ್ಸ್ ಆಗಿರುತ್ತವೆ ಎಂಬುದು ಹಲವರ ಅಂಬೋಣ. ಫಿಕ್ಸ್ ಎಂದರೆ ರೇಟು ಫಿಕ್ಸ್ ಅಂತ ಬಿಡಿಸಿ ಹೇಳಬೇಕಾಗಿಲ್ಲ ತಾನೆ. ನಿನ್ನೆ ಮೈಸೂರಿನಲ್ಲೂ ಇಂಥದೊಂದು ಪ್ರಸಂಗ ನಡೆದಿದೆ. ಗೌರವ ಡಾಕ್ಟರೇಟ್ ಪದವಿ ಪ್ರದಾನದ ದೊಡ್ಡ ಸಮಾರಂಭವೊಂದು ಹೋಟೆಲ್ ಒಂದರಲ್ಲಿ ಏರ್ಪಾಡಾಗಿತ್ತು. ಇನ್ನೇನು ಆಕಾಂಕ್ಷಿಗಳು ಗೌನು, ಕ್ಯಾಪು ತೊಟ್ಟು ಗೌಡಾ ಪದವಿಯನ್ನು ತೊಡಬೇಕು ಅನ್ನುವಷ್ಟರಲ್ಲಿ ಅಲ್ಲಿಗೆ ಪೊಲೀಸರು ಹಾಜರ್. ಯಾಕೆಂದರೆ ಈ ಗೌಡಾಗಳನ್ನು ದಯಪಾಲಿಸುತ್ತಿದ್ದ ವಿಶ್ವವಿದ್ಯಾಲಯವೇ ನಕಲಿಯಂತೆ. ಅಂದಮೇಲೆ ಅದು ಕೊಡಮಾಡುವ ಗೌಡಾ ಅಸಲಿ ಹೇಗಾಗಿರುತ್ತದೆ ಬಿಡಿ. ಪಾಪ. ಇದೆಲ್ಲ ವಿಷಯ ಗೊತ್ತಿದ್ದೋ, ಗೊತ್ತಿಲ್ಲದೆಯೋ ಅಲ್ಲಿಗೆ ಬಂದಿದ್ದ ಶಾಸಕರೊಬ್ಬರಿಗೆ ಪೊಲೀಸರನ್ನು ನೋಡಿ ಶಾಕ್ ಆಯಿತಂತೆ. ಇಷ್ಟಕ್ಕೂ ಈ ಪದವಿ ಪಡೆಯುವವರ ಹೆಸರಿನಲ್ಲಿ ಅವರ ಹೆಸರೇ ಮೊದಲಿತ್ತಂತೆ. 50 ಸಾವಿರದಿಂದ 1 ಲಕ್ಷದ ವರೆಗೆ ಹಣ ಪಡೆದು ಗೌಡಾ ದಯಪಾಲಿಸಲಾಗುವುದಂತೆ. ಅಂದಮೇಲೆ ಇದು ಒಂದು ದಂಧೆ ಅಂದಹಾಗಾಯಿತು. ಹಾಗಾದರೆ ಇಂಥವರನ್ನು ನಗೌಡಾ (ಅಂದರೆ ನಕಲಿ ಗೌರವ ಡಾಕ್ಟರೇಟ್) ಅಥವಾ ಪೇಯ್ಡ್ ಆನರರಿ ಡಾಕ್ಟರೇಟ್ (ಪಿಎಚ್‌ಡಿ) ಅಂತಲಾದರೂ ಕರೆಯಬಹುದು. ಪೇಯ್ಡೋ ಗೀಡೋ ಒಟ್ಟಿನಲ್ಲಿ ಗೌಡಾ ಆಗಬೇಕು ಎಂಬ ಗೀಳು ಮತ್ತು ಹುಚ್ಚು ಕೆಲವರಲ್ಲಿರುತ್ತದೆ. ಇಂಥ ಹುಚ್ಚರನ್ನು ವಂಚನೆಯ ಬಚ್ಚಲಿನಲ್ಲಿ ಬೀಳಿಸಲು ಈ ಗೌಡಾ ಫ್ಯಾಕ್ಟರಿಗಳು ವ್ಯವಸ್ಥಿತ ಸಂಚು ರೂಪಿಸುವುದಂತೂ ನಿಜ. ಮಿಕಗಳನ್ನು ಹುಡುಕುವುದು ಅವುಗಳ ಕೆಲಸವಾದರೆ ಬಲಿಪಶುವಾಗುವ ಅರಿವಿಲ್ಲದೆ ಬಲೆಗೆ ಬೀಳುವ ಗೌಡಾಸಕ್ತ ಮಿಕಗಳಿಗೂ ಕಡಿಮೆ ಇಲ್ಲ ಬಿಡಿ.

## ಸಂಪಾದಕರ ಸದ್ಯಶೋಧನೆ

# ಕಾಡನ್ನು ಹೇಗೆ ಇಟ್ಟುಕೊಳ್ಳಬೇಕು?

ನಾವೆಲ್ಲಾ ನಮ್ಮ ನಮ್ಮ ಮನೆ ಅಂಗಳವನ್ನು ಚೆಂದವಾಗಿ ಇಟ್ಟುಕೊಳ್ಳುತ್ತೇವೆ. ಆದರೆ ಅಂಗಳ ದಾಟಿ ರಸ್ತೆಗೆ ಹೆಜ್ಜೆಯಿಟ್ಟರೆ, ಇಡೀ ಬೀದಿ ಗಬ್ಬು ನಾರುತ್ತಿರುತ್ತದೆ. ಕಾಡನ್ನೂ ಮನೆಯ ಅಂಗಳದಂತೆ ಚೆಂದವಾಗಿ ಇಟ್ಟುಕೊಳ್ಳಬಹುದು ಎಂಬುದನ್ನು ನಾನು ನೋಡಿದ್ದು ರವಾಂಡಾದಲ್ಲಿ. ಆ ದೇಶದ ರಾಜಧಾನಿ ಕಿಗಾಲಿಯಿಂದ ಸುಮಾರು ಇನ್ನೂರು ಕಿಮಿ ದೂರದಲ್ಲಿರುವ, ಉಗಾಂಡ ಮತ್ತು ಕಾಂಗೋ ದೇಶಗಳ ಗಡಿ ಪ್ರದೇಶದಲ್ಲಿರುವ ಪ್ರಸಿದ್ಧ ವಿರುಂಗಾ ಅಭಯಾರಣ್ಯದಲ್ಲಿ ಮೌಂಟನ್ ಗೊರಿಲ್ಲಾ ಚಾರಣಕ್ಕೆ ಹೋದಾಗ, ಅಲ್ಲಿನ ದಟ್ಟ ಅರಣ್ಯಗಳನ್ನು ಖುದ್ದು ನೋಡುವ ಅವಕಾಶ ಸಿಕ್ಕಿತ್ತು. ಚಾರಣಕ್ಕಾಗಿ ನಾವು ಬೇಸ್ ಕ್ಯಾಂಪ್‌ನಲ್ಲಿ ಸಿದ್ಧರಾಗುವಾಗ, ನಮ್ಮ ಗೈಡ್ (ಗೊರಿಲ್ಲಾ ವಿಸ್ಪರರ್ ಅಥವಾ ಗೊರಿಲ್ಲಾ ಭಾಷೆ ಬಲ್ಲವ) ಕಾಡಿನಲ್ಲಿ ಅನುಸರಿಸುವ ನಿಯಮಗಳ ಬಗ್ಗೆ ನಮಗೆ ವಿವರಿಸಿದ. 'ಸಿಗರೇಟು ವಾಸನೆ ಬಂದರೆ ಸಾಕು, ಗೊರಿಲ್ಲಾಗಳು ಟೆಂಪ್ಟ್ ಆಗುವುದರಿಂದ, ಚಾರಣಕ್ಕೆ ಹೊರಟ ನಂತರ ಸಿಗರೇಟು ಸೇದಬಾರದು. ಈಗಲೇ ಸಿಗರೇಟು ಸೇದಿ, ವಾಸನೆ ಬರದಂತೆ ಬಾಯಿ ತೊಳೆದುಕೊಂಡು ಬನ್ನಿ. ಆರೇಳು ತಾಸು ಸಿಗರೇಟು ಸೇದದಿದ್ದರೆ ಆಗುವುದಿಲ್ಲ ಎನ್ನುವವರು ಚಾರಣಕ್ಕೆ ಸಂಬಂಧಿಸಿದ ಸಿನಿಮಾ ನೋಡಬಹುದು' ಎಂದು ಹೇಳಿದ. ಗೊರಿಲ್ಲಾಗಳಿಗೂ, ಮನುಷ್ಯರಿಗೂ ಹೆಚ್ಚು ವ್ಯತ್ಯಾಸವಿಲ್ಲ. ಅವು ಮಾತಾಡುವುದಿಲ್ಲ, ನಗುವುದಿಲ್ಲ ಎಂಬುದನ್ನು ಬಿಟ್ಟರೆ, ಉಳಿದಂತೆ ಪಕ್ಕಾ ಮನುಷ್ಯರಂತೆ. 'ನೀವು ಕಾಡಿನಲ್ಲಿ ಸುಮಾರು ಆರೇಳು ಗಂಟೆ ಇರಬೇಕಾಗುತ್ತದೆ. ಈ ಸಮಯದಲ್ಲಿ ಯಾರೂ ಕಾಡಲ್ಲಿ ಮಲ - ಮೂತ್ರ ವಿಸರ್ಜನೆ ಮಾಡುವಂತಿಲ್ಲ. ತೀರಾ ಅನಿವಾರ್ಯ ಸಂದರ್ಭದಲ್ಲಿ ಅಂಥ ಪ್ರಸಂಗ ಬಂದರೆ ಎರಡು ಅಡಿ ಗುಂಡಿ ತೆಗೆದು, ಮಲ ಅಥವಾ ಮೂತ್ರ ವಿಸರ್ಜನೆ ಮಾಡಿ, ನಂತರ ಗುಂಡಿಯನ್ನು ಮುಚ್ಚಬೇಕು. ಮುಕ್ತ ವಾತಾವರಣದಲ್ಲಿ ಮೂತ್ರ ವಿಸರ್ಜನೆ ಮಾಡುವಂತಿಲ್ಲ. ಈ ವಿಷಯದಲ್ಲಿ ವಿನಾಯತಿ ಇಲ್ಲ. ಅಂಥ ಸಂದರ್ಭ ಬಂದಾಗ, ಗುಂಡಿ ತೋಡಲು ಪಿಕಾಸಿ ಅಥವಾ ಗುದ್ದಲಿ ಬೇಕಾದರೆ ಕೇಳಿ, ನಾನು ಕೊಡುತ್ತೇನೆ' ಎಂದ. ಕಂಡಕಂಡಲ್ಲಿ ಮೂತ್ರವಿಸರ್ಜನೆ ಮಾಡಿದರೆ, ಮೂಗಾಳಿ ಅರಸಿ ಸಂಚರಿಸುವ ಗೊರಿಲ್ಲಾಗಳು ಕಾಡಿನಲ್ಲಿ ದಾರಿ ತಪ್ಪಿಸಿಕೊಳ್ಳುವುದರಿಂದ ಈ ವಿಷಯದಲ್ಲಿ ಅಷ್ಟು ಕಟ್ಟುನಿಟ್ಟು. 'ಯಾವ ಕಾರಣಕ್ಕೂ ನೀರಿನ ಬಾಟಲಿ, ಬಿಸ್ಕತ್ ಅಥವಾ ಇನ್ನಿತರ ತಿಂಡಿಗಳ ಪೊಟ್ಟಣಗಳನ್ನು ಬಿಸಾಡಬಾರದು. ಬಿಸಾಡಿದ್ದು ಕಂಡು ಬಂದರೆ, ಸ್ಥಳದಲ್ಲೇ ಎರಡು ಸಾವಿರ ರೂಪಾಯಿ ದಂಡ ಕಟ್ಟಬೇಕು. ನನಗೆ ನಿಮ್ಮಷ್ಟೇ ಗೊರಿಲ್ಲಾಗಳೂ ಮುಖ್ಯ. ಈ ವಿಷಯದಲ್ಲಿ ನಾನು ರಾಜಿ ಆಗುವುದಿಲ್ಲ ಅಥವಾ ಎಷ್ಟು ಕೆಟ್ಟವನಾಗುವುದಕ್ಕೂ ಸಿದ್ಧ. ನೆಗಡಿ, ಕೆಮ್ಮು, ಸೀನು ಬಂದರೆ, ಕಡ್ಡಾಯವಾಗಿ ಮುಖಕ್ಕೆ ಟವೆಲನ್ನು ಹಿಡಿಯಲೇಬೇಕು. ನೀವು ಸೀನಿದ, ಕೆಮ್ಮಿದ ಹತ್ತು ನಿಮಿಷಗಳಲ್ಲಿ ಗೊರಿಲ್ಲಾಗಳೂ ಸೀನುತ್ತವೆ, ಕೆಮ್ಮುತ್ತವೆ. ಅವು ಅಷ್ಟು ಶೀಘ್ರ ಸಾಂಕ್ರಾಮಿಕ ಕಾಯಿಲೆಗಳನ್ನು ಅಂಟಿಸಿಕೊಳ್ಳುತ್ತವೆ' ಎಂದು ಗೈಡ್ ಹೇಳಿದ. 'ನೀವು ಗೊರಿಲ್ಲಾ ಹತ್ತಿರ ಹೋಗಿ ಫೋಟೋ ಕ್ಲಿಕ್ಕಿಸಬಹುದು. ಆದರೆ ಯಾವ ಕಾರಣಕ್ಕೂ ಫ್ಲ್ಯಾಷ್ ಲೈಟ್ ಬಳಸುವಂತಿಲ್ಲ' ಎಂದು ಎಚ್ಚರಿಕೆ ನೀಡಿದ. ನಾನು ಆ ರವಾಂಡಾ ಕಾಡಿನಲ್ಲಿ ಸುಮಾರು ಎಂಟು ತಾಸು ತಿರುಗಾಡಿರಬಹುದು, ಅಲ್ಲಿ ಎಲ್ಲೆಲ್ಲೂ ಒಂದೇ ಒಂದು ಕಸ,ಕಡ್ಡಿ, ಸಿಗರೇಟು ಪ್ಯಾಕ್, ನೀರಿನ ಬಾಟಲಿ, ಚಿಪ್ಸ್ ಪೊಟ್ಟಣ, ಸಿಗರೇಟು ತುಂಡು, ಒಡೆದ ಬಿಯರ್ ಬಾಟಲಿ, ಪ್ಲಾಸ್ಟಿಕ್ ಕವರ್.. ಹೀಗೆ ಒಂದೇ ಒಂದು ಅನಪೇಕ್ಷಿತ ವಸ್ತು ಕಣ್ಣಿಗೆ ಕಾಣಲಿಲ್ಲ. ಕಾಡಿನಲ್ಲಿ ಹಾದುಹೋಗುವ ಕಿರಿದಾದ ಕಾಲುದಾರಿ ಬಿಟ್ಟರೆ ಮನುಷ್ಯನ ಅಲೆದಾಟದ ಯಾವ ಕುರುಹು ಸಹ ಅಲ್ಲಿ ಕಾಣಲಿಲ್ಲ. ಇಡೀ ಅರಣ್ಯ ಸ್ವಚ್ಛ, ಹಸುರು, ಸುಂದರ. ಕಾಡನ್ನೂ ನಮ್ಮ ಅಂಗಳಕ್ಕಿಂತ ಶಿಸ್ತಾಗಿ ಇಟ್ಟುಕೊಳ್ಳಬಹುದು.

# ನಾಯಕಾದರ್ಶ ಮತ್ತು ನಾಗರಿಕ ಪ್ರಜ್ಞೆ



ದಾಸ್ ಕ್ಯಾಪಿಟಲ್
ಟಿ.ದೇವಿದಾಸ್ ಬರಹಗಾರ ಶಿಕ್ಷಕ
dascapital1205@gmail.com

ಅನಾಗರಿಕತೆಯ ಕಾಲದಲ್ಲೂ ಗುಂಪಿನ ನಾಯಕನೆಂದರೆ ಅದರ ಮುಖಂಡನೇ ಆಗಿದ್ದ. ಕಾಲಗತಿಯಲ್ಲಿ ಇದು ರೂಪಾಂತರ ಹೊಂದುತ್ತಾ ಮಹಾಪ್ರಭುತ್ವವಾಗಿ 'ರಾಜಾ ಪ್ರತ್ಯಕ್ಷ ದೇವತಾ' ಎಂಬಲ್ಲಿಯವರೆಗೆ ಬೆಳೆಯಿತು. ಎಲ್ಲರೂ ತಮ್ಮಲ್ಲಿರುವ ತಮ್ಮಂತೆಯೇ ಇರುವ ಒಬ್ಬನನ್ನು ನಾಯಕನನ್ನಾಗಿಸಿಕೊಳ್ಳುವ ಈ ರೀತಿಯ ಗುಂಪನ್ನು ಒಂದು ರಾಷ್ಟ್ರದಂಥ ವಿಶಾಲವಾದ ವ್ಯಾಪ್ತಿಯಲ್ಲಿ ನೋಡಿದಾಗ ಗುಂಪಿನಿಂದಲೇ ಹುಟ್ಟಿಕೊಳ್ಳುವ ನಾಯಕನ ಸ್ಥಾನದ ಜವಾಬ್ದಾರಿ ಅರಿವಾಗುತ್ತದೆ. ಹೀಗೆ ತಮ್ಮಲ್ಲೇ ಒಬ್ಬನನ್ನು ನಾಯಕನನ್ನಾಗಿ ಮಾಡಿ ಅವನನ್ನೇ ಬೆಂಬಲಿಸುವ ಆ ಗುಂಪು ಅಥವಾ ಆ ರಾಷ್ಟ್ರ ಅವನಿಂದ ಏನೇನು ಬಯಸುತ್ತದೋ ಅವೆಲ್ಲವೂ ಅವನ ಬೌದ್ಧಿಕ ಮತ್ತು ಮಾನಸಿಕ ಅಸ್ತಿತ್ವಕ್ಕೆ ಬಲ ತುಂಬುತ್ತಾ ಹೋಗುತ್ತದೆ. ಅಂಥ ಬಲವನ್ನು ಅವನಲ್ಲಿ ಹುಟ್ಟುವಂತೆ ಮಾಡುವುದು ಕೂಡ ಅವನನ್ನು ನಾಯಕನನ್ನಾಗಿಸಿದ ಆ ಗುಂಪೇ ಆಗಿರುತ್ತದೆ. ಇದೊಂದು ಒಪ್ಪಿತ ವ್ಯವಸ್ಥೆ. ಇಡಿಯ ಗುಂಪು ಅವನನ್ನು ಅನುಸರಿಸುತ್ತದೆ; ಅನುಕರಿಸುತ್ತದೆ. ತಮ್ಮ ದೌರ್ಬಲ್ಯಗಳನ್ನು ಹೋಗಲಾಡಿಸಲು ತಮ್ಮ ನಾಯಕನೇ ತಮಗೆ ಸಮರ್ಥ ಆದರ್ಶವೆಂಬ ಪ್ರಜ್ಞೆಯಲ್ಲೂ ನಾಯಕಾದರ್ಶ ಹುಟ್ಟಿ, ಬೆಳೆಯುತ್ತಾ ಅಂಥ ನಾಯಕಾದರ್ಶವೇ ನಿರಂಕುಶ ಪ್ರಭುತ್ವವಾಗಿ, ರಾಜಪ್ರಭುತ್ವವಾಗಿ, ಈಗ ನಮ್ಮ ಕಾಲಘಟ್ಟದಲ್ಲಿ ಭಾರತದಂಥ ವೈವಿಧ್ಯಮಯ ರಾಷ್ಟ್ರಕ್ಕೆ ಪ್ರಜಾಪ್ರಭುತ್ವವಾಗಿ ಹೆಮ್ಮರವಾಗಿ ನಿಂತಿದೆ. ತಮ್ಮ ನಾಯಕನೆಂದರೆ ದೇವರಂತೆ. ಅವನೆಂದೂ ತಪ್ಪು ಮಾಡುವುದಿಲ್ಲ. ತಮ್ಮ ನಾಯಕನಲ್ಲೇ ದೇವರನ್ನು ಕಾಣುವ ಆ ಕಾಲದಲ್ಲಿಯೂ ನಾಯಕಾದರ್ಶವು ಔನ್ನತ್ಯದ ತುದಿಯ ಮೆಟ್ಟಲಿನಲ್ಲಿತ್ತೆಂಬುದನ್ನು ಚರಿತ್ರೆಯಲ್ಲಿ ಕಾಣಬಹುದು. ತಮ್ಮನ್ನಾಳುತ್ತಾ, ರಾಜ್ಯಾಡಳಿತ ನಡೆಸುತ್ತಾ, ತಮ್ಮ ತಪ್ಪುಒಪ್ಪುಗಳನ್ನು ನೋಡಿಕೊಳ್ಳುವ ಅಧಿಕಾರವನ್ನು ತಾವೇ ನೀಡಿದ ಆ ಗುಂಪು ತಮ್ಮಲ್ಲಿಲ್ಲದ ಶ್ರೇಷ್ಠಮೌಲ್ಯಗಳನ್ನು ತಮ್ಮ ನಾಯಕನಲ್ಲಿ ಕಾಣುವುದಕ್ಕೆ ಆರಂಭಿಸಿದ ದಿನದಿಂದಲೂ ನಾಯಕಾದರ್ಶದ ಘನತೆ ಹೆಚ್ಚುತ್ತಾ ಬಂತು. ಆಗ ಸ್ಪರ್ಧೆಯಿಲ್ಲದ ಕಾಲವದು. ಯಾವ ಕೊಳಕು ರಾಜಕೀಯದ ಸೋಂಕು ಇಲ್ಲದ ದಿನಮಾನಗಳಲ್ಲಿ ನಾಯಕನೆಂದರೆ ಸರ್ವಸ್ವ, ಎಲ್ಲವೂ ಅವನನ್ನೇ ಆಧರಿಸುತ್ತದೆಂಬ ಪ್ರಜ್ಞೆಯನ್ನು ತಾವೇ ಆರಿಸಿದ ನಾಯಕನಲ್ಲಿ ಕಾಣುತ್ತಾ ಬಂದ ಆ ಗುಂಪು ನಾಯಕಾದರ್ಶವನ್ನು ಅವನಲ್ಲಿ ಬೆಳೆಸುತ್ತಾ ಅದನ್ನು ಸರ್ವಕಾಲಕ್ಕೂ ಅಪೇಕ್ಷಿಸುತ್ತಾ ಬಂದಿರುವುದರಿಂದ ಈಗಲೂ ನಾಯಕನಾದವನಿಗೆ ಒಂದು ವಿಶೇಷವಾದ ಸ್ಥಾನವನ್ನು ನೀಡಿದೆ ನಮ್ಮ ಸಮಾಜ.

ರಾಜನನ್ನೇ ದೇವರೆಂದು ಆರಾಧಿಸಿದ ದೇಶ ನಮ್ಮದು. ತನ್ನ ಧರ್ಮಪತ್ನಿಯ ಬಗ್ಗೆ ಪ್ರಜೆಯೊಬ್ಬ ಸಂಶಯದ ಮಾತುಗಳನ್ನು ವ್ಯಕ್ತಪಡಿಸಿದ ಎಂದು ಧರ್ಮಪತ್ನಿಯನ್ನೇ ಪರಿತ್ಯಾಗ ಮಾಡಿದ ಶ್ರೀರಾಮಚಂದ್ರನಂಥ ಶ್ರೇಷ್ಠರಾಜನೊಬ್ಬ ಹುಟ್ಟಿ ಆಳಿದ ನಾಡಿದು. ಶ್ರೀರಾಮಚಂದ್ರನ ನಾಯಕಾದರ್ಶದ ಉದಾತ್ತಮೌಲ್ಯವಾಗಿ ಸೀತಾಪರಿತ್ಯಾಗ ನಮ್ಮನ್ನಾವರಿಸಿದೆ. ಹೆಂಡತಿಯ ಪಾತಿವ್ರತ್ಯವೆಂಬುದು ಸಂಶಯಾತೀತವೆಂದೂ, ಅದನ್ನು ಯಾರೂ ಪ್ರಶ್ನಿಸಬಾರದೆಂದು ದರ್ಪವನ್ನು ತೋರಿದ ರಾಜನನ್ನೂ ಚರಿತ್ರೆಯಲ್ಲಿ ಓದಿದ್ದೇವೆ. ಇದೂ ಒಂದು ತರದ ನಾಯಕಾದರ್ಶವೇ. ತಾವು ಹೇಗೆ ಇರಲಿ, ತಮ್ಮ ನಾಯಕನನ್ನು ಮಾತ್ರ ಪರಮಾದರ್ಶವಾಗಿಯೇ ಕಾಣುವ ಜನರು ತಮ್ಮೊಳಗಿನ ನ್ಯೂನತೆಗಳು, ಲೋಪದೋಷಗಳು ಸ್ವಾಭಾವಿಕವಾಗಿಯೇ ಇರುವಂಥವೆಂಬ ಭಾವನೆಯಲ್ಲಿರುತ್ತಾರೆ. ಮತ್ತು ಅದು ಹಾಗೆಯೇ ಇದ್ದು ನಾಯಕನ ತಪ್ಪನ್ನೇ ದೂಷಿಸುವ, ಅರೋಪಿಸುವ ಮನಸ್ಥಿತಿಯನ್ನು ಹೊಂದಿರುತ್ತದೆ. ತಮ್ಮ ಗುಣಗಳೇನೇ ಇರಲಿ, ತಮ್ಮ ನಾಯಕ ಮಾತ್ರ ಸದ್ಗುಣಗಳ ಗಣಿಯಾಗಿರಬೇಕೆಂದು ಬಯಸುವುದು ರಾಜಪ್ರಭುತ್ವದಲ್ಲೂ ಇತ್ತು, ಪ್ರಜಾಪ್ರಭುತ್ವದಲ್ಲೂ ಇದೆ. ತಾವೇ ಆರಿಸಿ ಕಳಿಸಿದ ತಮ್ಮ ಪ್ರತಿನಿಧಿ ಭ್ರಷ್ಟನಾಗುವುದನ್ನು ಪ್ರಜಾಪ್ರಭುತ್ವದಲ್ಲೂ ಜನತೆ ಸಹಿಸುವುದಿಲ್ಲ. ಸಾರ್ವಕಾಲಿಕ ನೈತಿಕತೆಯೆಂಬುವುದು ಅವನಲ್ಲಿ ಹಾಸುಹೊಕ್ಕಾಗಿರಬೇಕೆಂದು ಅಪೇಕ್ಷಿಸುವ ಜನತೆ ತಮ್ಮ ಮನಸ್ಸಿಗೊಲ್ಲದ ಅಭಿವ್ಯಕ್ತಿಯನ್ನು ತಮ್ಮ ನಾಯಕನಲ್ಲಿ ಕಂಡಾಗ ಅವನನ್ನು ಅಪರಾಧಿಯೆಂಬಂತೆ ಕಂಡು ದಂಗೆಯೆದ್ದದ್ದೂ ಇದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಹೀಗೆಯೇ ನಡೆಯುವುದು. ತಾವು ಹೇಗಿದ್ದರೂ ತಮ್ಮ ನಾಯಕ ಮಾತ್ರ ಪರಿಶುದ್ಧನಾಗೇ ಇರಬೇಕೆನ್ನುವ ಒಟ್ಟೂ ಮನೋಧರ್ಮವೇ ಪ್ರಭುತ್ತ್ವದಲ್ಲೂ ಕಾಣುತ್ತಿರುವ ಈ ದಿನಗಳಲ್ಲಿ ಜನತೆ ನೈತಿಕತೆಯನ್ನು ತಮ್ಮ ಪ್ರತಿನಿಧಿ ಅಥವಾ ನಾಯಕನಲ್ಲಿ ಮಾತ್ರ ಕಾಣುತ್ತಾರೆ. ಇದು ಅಚ್ಚರಿಯಷ್ಟೇ ಅಲ್ಲ ಸತ್ಯ ಕೂಡ. ಎಲ್ಲರಲ್ಲೂ ಬಲಹೀನತೆಗಳು, ದೌರ್ಬಲ್ಯಗಳು ಇರುತ್ತವೆ. ಪ್ರಜಾಪ್ರಭುತ್ವವೆಂಬುದು ರಾಜಪ್ರಭುತ್ವಕ್ಕಿಂತ ಭಿನ್ನವಾಗಿರುತ್ತದೆ. ರಾಜಪ್ರಭುತ್ವವೆಂಬುದು ವಂಶ ಪಾರಂಪರ್ಯವಾಗಿ ಬರುವಂತದಾದ್ದರಿಂದ ಜನತೆಗೆ ರಾಜನನ್ನು ಅಪರೋಕ್ಷವಾಗಿ ಪ್ರಶ್ನಿಸಿ, ದೂಷಿಸಿ ಆರೋಪಿಸುವ ನೈತಿಕತೆ ಇರುತ್ತದೆಂದ ಮಾತ್ರಕ್ಕೆ ಅದು ಪ್ರಭುತ್ವದಿಂದ ಬಂದುದಾಗಿರುವುದಿಲ್ಲ. ಆದರೆ, ಪ್ರಜಾಪ್ರಭುತ್ವ ತನ್ನ ಪ್ರಜೆಗಳಿಗೆ ಇಂಥ ಹಕ್ಕನ್ನು, ಅಧಿಕಾರವನ್ನು ನೀಡಿಯೇ ನಾಯಕತ್ವವನ್ನು ಆಯ್ದುಕೊಳ್ಳುವಲ್ಲಿ ಸ್ವಾತಂತ್ರ್ಯವನ್ನು ನೀಡಿರುತ್ತದೆ. ಪ್ರಶ್ನಿಸುವ ಮೂಲಕ ಪ್ರಭುತ್ವಕ್ಕೆ ಎಚ್ಚರವನ್ನು ನೇರವಾಗಿ ರವಾನಿಸುತ್ತಾ ತಮ್ಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಬೇಕಾದ ಅಗತ್ಯಗಳನ್ನು ಅವರೇ ಒದಗಿಸಿಕೊಳ್ಳುತ್ತಾರೆ. ಈ ಪ್ರಕ್ರಿಯೆ ನಿರಂತರವಾಗಿರುವುದರಿಂದ ತಾವೇ ರೂಪಿಸಿದ ಪ್ರಭುತ್ವವನ್ನೂ ಮೀರಿ ಜನತೆಗೆ ನಿಲ್ಲುವುದಕ್ಕೆ ಸಾಧ್ಯವಾಗುವುದು ಪ್ರಜಾಪ್ರಭುತ್ವದಲ್ಲಿ ಮಾತ್ರ. ಪ್ರಭುತ್ವದಲ್ಲಿ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕೆಂಬ ಉದಾತ್ತತೆಯಲ್ಲಿ ಕೊನೆಗೆ ಆದರ್ಶವೇ ಪ್ರಭುತ್ತ್ವವನ್ನೂ ಮೀರಿ ಬೆಳೆದದ್ದು ಮರ್ಯಾದಾ ಪುರುಷೋತ್ತಮನಾದ ಶ್ರೀರಾಮಚಂದ್ರನ ಆಡಳಿತದಲ್ಲಿ. ರಾಜ ಪ್ರಜೆಗಳಿಗಷ್ಟೇ ರಾಜನಾಗಿರದೆ ತನಗೂ ತಾನು ರಾಜನಾಗುವುದು ಹೇಗೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾಪುರುಷ ಅಯೋಧ್ಯೆಯ ಪ್ರಭು ಶ್ರೀರಾಮಚಂದ್ರ. ಇದು ಪ್ರಜಾಪ್ರಭುತ್ವದಲ್ಲೂ ಸಾಧ್ಯವಾಗುವುದು ನಾಯಕನಾದವ ತನ್ನಲ್ಲಿ ರೂಢಿಸಿಕೊಂಡ ಮೌಲ್ಯಾದರ್ಶಗಳಿಂದ. ತೇತ್ರಾಯುಗದಲ್ಲಿ ರಾಮನ ಪ್ರಜೆಗಳಲ್ಲಿದ್ದ ನೈತಿಕತೆ ಮತ್ತು ಪ್ರಾಮಾಣಿಕತೆ ಕಲಿಯುಗದಲ್ಲಿ ಬದುಕುತ್ತಿರುವ ನಮ್ಮಲ್ಲಿದ್ದರೆ ನಮಗೊಬ್ಬ ಶ್ರೀರಾಮಚಂದ್ರನಂಥ ನಾಯಕ ಸಿಕ್ಕಾನು! ನಮ್ಮ ನಾಯಕ ಶ್ರೀರಾಮನಂಥವನಾಗಿರಬೇಕೆಂದು ಬಯಸುವ ನಾವು ಅಯೋಧ್ಯೆಯ ಪ್ರಜೆಗಳಂತಿರುವುದಕ್ಕೆ ಸಿದ್ಧರಿರುವುದಿಲ್ಲ. ಇದು ನಮ್ಮೊಳಗಿನ ರಾವಣಪ್ರಜ್ಞೆ.



ಇದು ಕಲಿಯುಗ. ಒಬ್ಬ ಉತ್ತಮನಾದ, ಯೋಗ್ಯನಾದ ನಾಯಕನನ್ನು ಮೆಚ್ಚುವವರಿಲ್ಲಿದ್ದಾರೆ. ತಮ್ಮ ಭ್ರಷ್ಟಾಚಾರವನ್ನು ಜೀವಂತವಾಗೇ ಉಳಿಸಿ ಬೆಳೆಸಿಕೊಳ್ಳಲು ಸಹಕರಿಸುವ ಅಯೋಗ್ಯನಾದ, ಅಧಮನಾದ ನಾಯಕನನ್ನು ಮೆಚ್ಚುವವರೂ ಇಲ್ಲಿದ್ದಾರೆ. ಬಾಹ್ಯಜಗತ್ತಿಗೆ ಶ್ರೀರಾಮಚಂದ್ರನನ್ನು ಮೆಚ್ಚಿ ಹಾಡಿ ಹೊಗಳುವ ಈ ಕಾಲದ ಜನರಿಗೆ ಒಳಬದುಕಿಗೆ ರಾವಣಸ್ವರೂಪಿ ಬುದ್ಧಿಯೇ ಇಷ್ಟವಾಗಿರುತ್ತದೆ. ಈ ಬುದ್ಧಿ ಉಳಿದವರ ನೈತಿಕತೆಯನ್ನು ಸದಾ ಪ್ರಶ್ನಿಸುತ್ತಾ ತಾನೂ ಹೇಗಿದ್ದರೂ ಈ ಸಮಾಜ ತನ್ನನ್ನು ಒಪ್ಪಬೇಕು ಅಥವಾ ಒಪ್ಪಲಿ, ಬಿಡಲಿ ತಾನಿರುವುದು ಹೀಗೆಯೇ ಎಂಬ ಉದ್ಧಟತನವನ್ನು ವ್ಯಕ್ತಪಡಿಸುತ್ತಿರುತ್ತದೆ. ಎಲ್ಲಾ ಆದರ್ಶಗಳನ್ನೂ ಸಾಂಕೇತಿಕವಾಗಿ ಗೌರವಿಸುವ ಬುದ್ಧಿ ಬೆಳೆಯುತ್ತಿರುವುದು ನಮ್ಮ ಕಾಲದ ದುರಂತ. ತನ್ನ ಪ್ರಜೆಯ ಸಂಶಯದ ಮಾತಿಗೆ ಪತ್ನಿಯನ್ನು ದೂರೀಕರಿಸಿದ ರಾಜಾ ಶ್ರೀರಾಮಚಂದ್ರ ಪ್ರಜಾತಂತ್ರವು ನೀಡುವ ವ್ಯಕ್ತಿ ಸ್ವಾತಂತ್ರ್ಯವನ್ನು ತನ್ನ ಪ್ರಜೆಗಳಿಗೆ ನೀಡಿದ್ದನೆಂಬುದನ್ನು ಸ್ಪಷ್ಟವಾಗಿಸುತ್ತದೆ. ಪ್ರಜೆಗಳನ್ನು ಗೌರವಿಸಿದ ಜಗತ್ತಿನ ಬೇರೆಲ್ಲೂ ಕಾಣದ ರಾಜಪ್ರಭುತ್ವದ ಶ್ರೇಷ್ಠಮಾದರಿ ಅಯೋಧ್ಯೆಯದ್ದು. ಇದು ನಾಯಕನಾಗಿ ಶ್ರೀರಾಮಚಂದ್ರ ಪ್ರಭು ಆಳಿದ ರಾಮರಾಜ್ಯದ ಮಾದರಿ. ನಗುಮೊಗದಿಂದಲೇ ತನ್ನ ಪ್ರಜೆಗಳ ಸಾಮೀಪ್ಯವನ್ನು ಬಯಸಿ ಕುಶಲೋಪರಿಯನ್ನು ಮಾತಾಡುವ ರಾಮನನ್ನು ಅಯೋಧ್ಯೆಯ ಪ್ರಜೆಗಳು ದೇವರೆಂದು ಕಂಡು ಆರಾಧಿಸಿದ್ದು ಅನಂತರದಲ್ಲಿ ಆಳಿದ ಅದೆಷ್ಟೋ ರಾಜಪ್ರಭುತ್ವಕ್ಕೆ ಸಂದಿದ ಸಾರ್ವಕಾಲಿಕ ಮರ್ಯಾದೆಯಾಗಿಯೇ ಉಳಿದಿದೆ.

ಪ್ರಜಾಪ್ರಭುತ್ವದ ಈ ದಿನಗಳಲ್ಲೂ ರಾಜಪ್ರಭುತ್ವವನ್ನೇ ಮೆಚ್ಚುವ ಜನರಿದ್ದಾರೆ. ರಾಜನೊಬ್ಬನಿಗೆ ಮಾತ್ರ ಪರಮಾಧಿಕಾರವಿರುವ ರಾಜಪ್ರಭುತ್ವದಲ್ಲಿ ಪ್ರಜೆಗಳಿಗೆ ಅಂತಿಮ ಉತ್ತರದಾಯಿಯಾಗಿ ರಾಜನೇ ಆಗಿರುತ್ತಾನೆ. ಆಗ ರಾಜನಿಗೆ ಮಾತ್ರ ಪ್ರಜೆಯಾದವ ಸೆಲ್ಯೂಟ್ ಹೊಡೆದರೆ ಸಾಕಾಗುತ್ತದೆ. ನೇರವಾಗಿಯೇ ತನ್ನ ದೂರನ್ನು, ನೋವನ್ನು ದೊರೆಯಲ್ಲಿ ಹೇಳಿಕೊಳ್ಳಬಹುದು. ಆದರೆ ಪ್ರಜಾಪ್ರಭುತ್ವದಲ್ಲಿ ಇದು ಸಾಧ್ಯವಾಗದ ಮಾತು. ಗ್ರಾಮಪಂಚಾಯತ್ ಅಧ್ಯಕ್ಷನಿಂದ ಹಿಡಿದು ರಾಷ್ಟ್ರಪತಿಯವರೆಗೆ ಸೆಲ್ಯೂಟ್ ಹೊಡೆಯುತ್ತಲೇ ಹೋಗಬೇಕು. ಆದರೆ ನಿಜವಾದ ಪ್ರಜಾಪ್ರಭುತ್ವದ ಶಕ್ತಿಯ ವ್ಯಾಖ್ಯಾನವೇ ಬೇರೆ. ತನ್ನ ಪ್ರತಿನಿಧಿಯನ್ನು ಆರಿಸುವ ಹಕ್ಕನ್ನು ಪ್ರಜಾಪ್ರಭುತ್ವದಲ್ಲಿ ಹೊಂದಿರುವ ಪ್ರಜೆಗಳು ತಮ್ಮ ನಾಯಕನನ್ನು ತಮ್ಮ ಪ್ರತಿನಿಧಿಗಳಲ್ಲೇ ಒಬ್ಬನನ್ನು ಆಯ್ದು ಅವನನ್ನೇ ಬಲಗೊಳಿಸುತ್ತಾ ಹೋಗಿ ಅಪರೋಕ್ಷವಾಗಿ ತಮ್ಮೊಳಗಿನ ಒಳಪ್ರಭುತ್ವದ ಪ್ರಜ್ಞೆಯನ್ನು ಪುಷ್ಟೀಕರಿಸಿಕೊಳ್ಳುತ್ತಾ ತಾವೇ ರಾಜರಾಗುವುದಿದೆಯಲ್ಲ ಅದು ಪ್ರಜಾಪ್ರಭುತ್ವದ ನಿಜವಾದ ಅಂತಃಶಕ್ತಿ. ತಾವೇ ಸೃಷ್ಟಿಸಿದ ನಾಯಕನಿಗೆ ತಮ್ಮನ್ನಾಳುವುದಕ್ಕೆ ಶಕ್ತಿ - ಸಾಮರ್ಥ್ಯವನ್ನು ಪ್ರಜೆಗಳು ತುಂಬುತ್ತಿರಬೇಕು. ಇದು ಹೇಗೆಂದರೆ, ವೈದಿಕ ವಿಧಿವಿಧಾನಗಳೊಂದಿಗೆ ಪ್ರತಿಷ್ಠಾಪನೆ ಮಾಡಿಕೊಂಡ ದೇವರ ಮೂರ್ತಿಗೆ ಸಂಕಲ್ಪ ಮತ್ತು ಪ್ರಾಣಶಕ್ತಿಯ ಮೂಲಕ ನಾವೇ ಶಕ್ತಿಯನ್ನು ಮಂತ್ರಘೋಷಗಳೊಂದಿಗೆ ಆವಾಹನೆ ಮಾಡಿ ಸಂಚಯ ಮಾಡಿಸಿದಂತೆ. ಪ್ರಜೆಗಳು ತಮ್ಮ ನಾಯಕನನ್ನು ಜಾಗೃತಗೊಳಿಸುವುದರಲ್ಲೇ ಪ್ರಭುತ್ವಕ್ಕೆ ಗಟ್ಟಿತನ ಬರುವುದು. ಆಗಲೇ ಪ್ರಜಾಪ್ರಭುತ್ವ ಗಟ್ಟಿಯಾಗುವುದು.

ತಾವು ಆರಿಸಿಕೊಂಡ ನಾಯಕನಿಗೆ ಗುಲಾಮನಾಗುವುದರಲ್ಲಿ ಪ್ರಜೆಗಳ ಒಳಿತಿದೆ. ತನ್ನನ್ನು ನಾಯಕನನ್ನಾಗಿ ಮಾಡಿದ ಪ್ರಜೆಗಳಿಗೆ ಗುಲಾಮನಾಗುವುದರಲ್ಲಿ ನಾಯಕನ ದೊಡ್ಡತನವಿದೆ. ಸಮಷ್ಟಿಯ ಹಿತಪ್ರಜ್ಞೆಯಿದೆ. ಈ ಎರಡರಲ್ಲೇ ರಾಷ್ಟ್ರದ ಹಿತವಿದೆ. ಸದ್ಯ ಮತ್ತು ಶಾಶ್ವತದಲ್ಲಿ ಭಾರತಕ್ಕೆ ಆಗಬೇಕಾಗಿರುವುದು ಇದೇ. ನಾವು ಆರಿಸಿಕೊಂಡ ನಾಯಕನಿಗೆ ಬಲವನ್ನು ತುಂಬುತ್ತಾ ನಾವೂ ದೃಢವಾಗುತ್ತಾ ವೈವಿಧ್ಯಮಯ ಸ್ಥಾವರರೂಪೀ ಭಾರತವನ್ನು ನಿರ್ಮಿಸಿಕೊಳ್ಳಲು ಸಾಧ್ಯ. ಭಾರತೀಯ ಪರಂಪರೆಯಲ್ಲಿನ ಭಾವ ಮತ್ತು ಆಕೃತಿಗಳಲ್ಲಿ ಏಕತೆಯನ್ನು ಸ್ಥಾಯಿಯಾಗಿಸಿ, ಉಳಿದವುಗಳಲ್ಲಿ ಜಂಗಮತ್ವವನ್ನು ಭಾರತ ಹೊಂದಬೇಕಾಗಿದೆ.

# ಹಾಡುಗಳಿಗೆ ಜೀವ ತುಂಬುತ್ತಿದ್ದ ಎಸ್‌ಪಿಬಿ ಎಂಬ ಕೋಟಿಗೊಬ್ಬ

ಅಭಿವ್ಯಕ್ತಿ
ಶ್ರೀ ವರಸದ್ಯೋಜಾತ ಸ್ವಾಮೀಜಿ
varasadyojatha2015@gmail.com



ಗಾಯಕ ಎಸ್.ಪಿ.ಬಾಲಸುಬ್ರಮಣ್ಯಂ ಅವರು ಸಂಗೀತ ಕ್ಷೇತ್ರದಲ್ಲಿ ಮಾಡಿದ ಸಾಧನೆ ಅನುಪಮವಾದುದು ಎನ್ನುವುದಕ್ಕಿಂತಲೂ ಗಾನ ವಿದ್ಯೆಯನ್ನು ಆಧಾರವಾಗಿಸಿಕೊಂಡು ಅವರ ಉಸಿರಿರುವವರೆಗೆ ಬಹುದೊಡ್ಡ ತಪಸ್ಸು ಮಾಡಿದವರು. ಎಸ್.ಪಿ.ಬಿಯವರ ತಪಸ್ಸಿನ ಫಲವಾಗಿ ಇಡೀ ಭಾರತ ದೇಶದ ಉದ್ದಗಲಕ್ಕೂ ಇವರ ಜನಪ್ರಿಯತೆ ವಿಸ್ತಾರಗೊಂಡಿರುವುದು ಇವರ ಸಾಧನೆಗೆ ಒಂದು ಅದ್ಭುತ ಉದಾಹರಣೆ. 64 ವಿದ್ಯೆಗಳಲ್ಲಿ ಗಾನ ವಿದ್ಯೆಯು ಮಾತ್ರ ಸಕಲ ಜೀವರಾಶಿಗಳನ್ನು ತನ್ನತ್ತ ಸೆಳೆಯುವ ಮಾಂತ್ರಿಕ ಶಕ್ತಿಯನ್ನು ಹೊಂದಿದೆ. ಅಷ್ಟೇ ಅಲ್ಲ ಸಕಲ ವಿದ್ಯೆಗಳು ಗಾನ ವಿದ್ಯೆಗೆ ಉಪವಿದ್ಯೆಗಳಾಗಿವೆ. ಉಳಿದೆಲ್ಲಾ ವಿದ್ಯೆಗಳು ಏಕಮಾತ್ರ ಶಕ್ತಿಯನ್ನು ಹೊಂದಿವೆ. ಮೇಘ ರಾಗವಾಗಲಿ, ದೀಪ ರಾಗವಾಗಲಿ, ಸಾರಂಗ ರಾಗವಾಗಲಿ ಇವು ಗಾನ ವಿದ್ಯೆಯ ಬಹುಶಕ್ತಿಯನ್ನು ಬಿಂಬಿಸುವ ಉದಾಹರಣೆಗಳಾಗಿವೆ.

ಮನಸ್ಸಿಗೆ ಆದ ಗಾಯ ವಾಸಿಯಾಗಲು ಮನಸ್ಸು ಬೇರೊಂದು ಕಡೆಗೆ ಆಕರ್ಷಿತಗೊಳ್ಳಬೇಕು. ನಮ್ಮ ಜೀವನದ ಜಂಜಾಟದಲ್ಲಿ ಮನುಷ್ಯ ಮಾತ್ರವಲ್ಲದೇ ಅನೇಕ ಜೀವರಾಶಿಗಳು ಕೂಡ ಅಪಾಯ ಹಾಗೂ ಆಪತ್ತುಗಳಿಂದ ಪಾರಾದಾಗಲೂ ಆ ಒಂದು ಕ್ಷಣವನ್ನು ಮರೆಯದೇ ಅವುಗಳ ದುಸ್ವಪ್ನವನ್ನು ಕಾಣುತ್ತಿರುತ್ತವೆ. ಅಂತಹ ಮನಸ್ಸುಗಳಿಗೆ ಗಾನ ವಿದ್ಯೆಯ ಇಂಪು ಸಂಪರ್ಕಗೊಂಡರೆ ಮತ್ತೆ ನವೋಲ್ಲಾಸಗೊಳ್ಳುತ್ತವೆ. ಅಂತಹ ಮಾಂತ್ರಿಕ ಶಕ್ತಿ ಸಂಗೀತಕ್ಕಿದೆ. ಸಂಗೀತ ಎಂಬ ಮೂರಕ್ಷರದ ಪದವು ಗೀತೆಯೊಂದಿಗೆ ಸಂ ಎಂಬ ಸ್ವರ ಮಾಧುರ್ಯವು ಸಂಗಮಗೊಂಡು ರಚನೆಯಾಗಿದೆ. ಗೀತೆ ಎಂಬ ಉಚ್ಚಾರವು ಗಾನ ಲೋಕವನ್ನು ನಮಗೆ ಪರಿಚಯಿಸುತ್ತದೆ. ಸಪ್ತ ಸ್ವರಗಳಲ್ಲಿ ಮೊದಲನೆಯದಾದ ಸ ಅಕ್ಷರದ ಜತೆಗೆ ಅಮ್ ಎಂಬ ಅನುನಾಸಿಕವು ಸಂಗೀತ ಪದಕ್ಕೆ ಹೊಂದಿಕೊಂಡಿರುವುದರಿಂದ ಅಖಂಡ ಈ ಗಾನ ಲೋಕವು ಓಂಕಾರದ ಪ್ರತಿಬಿಂಬವಾಗಿದೆ. ಅಂತೆಯೇ ಹಾಡುವಾಗ ಗಾಯಕನು ಮಾಡುವ ಆಲಾಪ ಹಾಗೂ ಆರಂಭಕ್ಕೆ ಮಾಡುವ ಆಲಾಪವು ಓಂಕಾರದ ಭವ್ಯ ಶಕ್ತಿಯಿಂದ ಕೂಡಿರುತ್ತದೆ.

ಎಸ್.ಪಿ.ಬಿ ಅವರು ತಮ್ಮ ಮಾತೃ ಭಾಷೆ ತೆಲುಗಿನೊಂದಿಗೆ ಜನ್ಮತಃ ಹುಟ್ಟಿನ ನಂಟು ಇಟ್ಟುಕೊಂಡಿದ್ದರೂ ಆ ಮೂಲಕ ಸಾಧನೆಗೆ ಇಳಿದು ಹಲವು ಭಾಷೆಗಳ ಹಿಡಿತ ಮಾತ್ರವಲ್ಲದೇ ಅವುಗಳ ಪ್ರಭುತ್ವವನ್ನು ಸಾಧಿಸಿದವರು. 16 ಭಾಷೆಗಳಲ್ಲಿ ಹಾಡಿ, ನಲಿದರೂ ಕೂಡ ಕನ್ನಡದ ಹಾಡುಗಳಲ್ಲಿ ಕನ್ನಡಿಗರು ಅವರಿಗೆ ಕೊಟ್ಟ ಪ್ರೀತಿ, ವಿಶ್ವಾಸ, ಗೌರವ ಇವುಗಳನ್ನು ಅವರು ಯಾವ ಭಾಗದಿಂದಲೂ ಕಂಡಿಲ್ಲ ಎಂದು ಮನದುಂಬಿ ಹೇಳಿದ್ದಾರೆ. ಹೀಗಾಗಿ ಕನ್ನಡ ನಾಡು ನುಡಿಯ ಗಾನ ವಿದ್ಯೆಯ ದತ್ತು ಪುತ್ರನಾದರೂ ಕನ್ನಡಾಂಬೆಗೆ ನಾನು ಹೆತ್ತ ಮಗನಂತೆ ಅಭಿಮಾನ ತಾಳುತ್ತೇನೆ ಎಂದು ನುಡಿದ ಅವರ ಅಭಿಮಾನದ ನುಡಿಗಳು ನಮ್ಮ ಶ್ರೇಷ್ಠ ಕನ್ನಡ ನಾಡು ನುಡಿಯ ಭವ್ಯತೆಯನ್ನು ಪರಿಚಯಿಸುತ್ತವೆ. ಯಾವುದೇ ಸಾಧನೆ ಮಾಡಲು ಸಾಧಕನಿಗೆ ಉತ್ಸಾಹವೇ ಮುಖ್ಯ ಪ್ರೇರಕ ಶಕ್ತಿಯಾಗಿರುತ್ತದೆ. ಅಂತಹ ಪ್ರೇರಣೆಯು ಎಸ್.ಪಿ.ಬಿ ಅವರಿಗೆ ಒಲಿದು, ಗಾನ ಸಾಧನೆಯಲ್ಲಿ ದೊರೆತು ಕನ್ನಡ ಭಾಷೆಯಲ್ಲಿ ಇನ್ನಷ್ಟು ಅಭಿವೃದ್ಧಿಗೊಂಡಿತು ಎಂದು ಹೇಳಿದರೆ ತಪ್ಪಾಗಲಾರದು.

ಕನ್ನಡಿಗರ ಸ್ವಭಾವ ಕನ್ನಡ ಭಾಷೆಯಷ್ಟೇ ಪವಿತ್ರವಾದುದು. ಪರ ಭಾಷೆಯ ಸಾಧಕನು ತನ್ನ ಭಾಷೆಗೆ ಬಂದು ಸಾಧನೆಗಿಳಿದರೆ ಆ ಸಾಧಕನನ್ನು ತಮ್ಮವನೇ ಎಂದು ಅಪ್ಪಿಕೊಳ್ಳುವ, ಒಪ್ಪಿಕೊಳ್ಳುವ, ಸ್ನೇಹ ಅಪ್ಪುಗೆಯ ಸಂಸ್ಕೃತಿಯುಳ್ಳವರು. ಹೀಗಾಗಿ ಎಸ್.ಪಿ.ಬಿಯವರಿಗೆ ಕನ್ನಡ ಕ್ಷೇತ್ರದಲ್ಲಿ ಸುಲಲಿತವಾಗಿ ಗಾನ ಹೊಳೆಯನ್ನು ಹರಿಸಲು ತೃಪ್ತಿದಾಯಕ ವಾತಾವರಣ ಸಿಕ್ಕಿತು. ಎಸ್.ಪಿ.ಬಿಯವರ



ಇನ್ನೊಂದು ವೈಶಾಲ್ಯತೆ ಎಂದರೆ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಯಾವುದೇ ಕನ್ನಡಿಗರು ಅವರೆದುರು ಬಂದು ಕುಂತರೆ ಆತ ಎಷ್ಟೇ ಚಿಕ್ಕ ಸಾಧಕನಾಗಿದ್ದರೂ ಆತನನ್ನು ತಮ್ಮ ಸರಿ ಸಮಾನವಾದ ಸಾಧಕನೆಂದು ಗೌರಸುತ್ತಿದ್ದರು. ಅವರ ಆ ಪ್ರೀತಿಯೂ ಚಿಕ್ಕ ಸಾಧಕನನ್ನು ಚೊಕ್ಕ ಸಾಧನೆಗಿಳಿಸಿ ಶ್ರೇಷ್ಠ ಸಾಧಕನನ್ನಾಗಿ ಮಾಡುವ ವಾತಾವರಣ ಸೃಷ್ಟಿಯಾಗುತ್ತಿತ್ತು. ಇದು ಎಸ್.ಪಿ.ಬಿಯವರ ವ್ಯಕ್ತಿತ್ವದ ಗುಣಗಳಲ್ಲಿ ವೈಶಾಲ್ಯತೆಗೊಂದು ಅದ್ಭುತ ಉದಾಹರಣೆ. ತಾವು ಬೆಳೆದು ಪರರನ್ನು ಬೆಳೆಸುವ ಅವರ ಗುಣ ವೈಶಿಷ್ಟ್ಯತೆಯು ಅವರನ್ನ ಹದಿನಾರು ಭಾಷೆಗಳಲ್ಲಿ ದಿಗ್ವಿಜಯ ಸಾಧಿಸುವಂತೆ ಮಾಡಿತು.

ಎಸ್.ಪಿ.ಬಿಯವರು 40 ಸಾವಿರ ಹಾಡುಗಳ ಸರದಾರ. ಯಾವ ಭಾಷೆಯಲ್ಲಿ ಗಾನ ಆರಂಭಿಸಿದರೂ ಆ ಭಾಷೆಯ ಮೂಲ ಹುಟ್ಟುಗಾರ ಎಂದು ಅನಿಸಿಕೊಳ್ಳುವಷ್ಟರ ಮಟ್ಟಿಗೆ ಆ ಭಾಷೆಯ ಹಾಡುಗಳಿಗೆ ಜೀವ ತುಂಬುತ್ತಿದ್ದರು. ಎಷ್ಟೋ ಗಾಯಕರನ್ನು ನೋಡಿದಾಗ ದಿನಕ್ಕೆ ಎರಡು ಮೂರು ಹಾಡುಗಳನ್ನು ಹಾಡಿ ಬಹಳ ಸಾಧನೆ ಮಾಡಿದೆ ಎಂದು ಹೆಮ್ಮೆ ಪಟ್ಟುಕೊಳ್ಳುವವರ ಮಧ್ಯೆ ಎಸ್.ಪಿ.ಬಿಯವರು ಒಂದೇ ದಿನದಲ್ಲಿ 17 ಹಾಡುಗಳನ್ನು ಹಾಡಿ ವಿಶ್ವ ದಾಖಲೆಯನ್ನೇ ನಿರ್ಮಿಸಿದರು. ಅವರ ದಾಖಲೆಯನ್ನು ಅನೇಕರು ಹೆಮ್ಮೆಯಿಂದ, ಮುಕ್ತ ಕಂಠದಿಂದ ಹೊಗಳಿದರು. ಆದರೆ ವೈದ್ಯರು ಮಾತ್ರ ಅವರಿಗೆ ಬೇರೊಂದು ರೀತಿಯ ಭಯದ ಸಲಹೆಯನ್ನೇ ನೀಡಿದರು. ನೀವು ಹಾಡುವಾಗ ಒಂದು ಬಿಳಿ ಕಾಗದವನ್ನು ನಿಮ್ಮ ಬಾಯಿ ಮುಂದೆ ಹಿಡಿದುಕೊಂಡು ಹಾಡಿರಿ, ನಿಮ್ಮ ಕಂಠದಿಂದ ಹೊರಹೊಮ್ಮುವ ಗಾನದ ಜತೆಗೆ ರಕ್ತಕಣಗಳು ಕೂಡ ಎಷ್ಟು ಸಿಡಿದು ಬರುತ್ತವೆ ಎಂಬುದನ್ನು ನೋಡಿರಿ ಎಂಬ ಸಲಹೆ ಬಂದಾಗ, ಎಸ್.ಪಿ.ಬಿಯವರು 'ಸುಮ್ಮನಿದ್ದು ಸಾಯುವುದಕ್ಕಿಂತ, ಹಾಡಿ ನನ್ನ ಗಂಟಲಿಗೆ ಕ್ಯಾನ್ಸರ ತಂದುಕೊಳ್ಳುತ್ತೇನೆ' ಎಂದು ವೈದ್ಯರೊಂದಿಗೆ ನಮ್ರ ಭಾವದಿಂದಲೇ ಸಮಾಲೋಚಿಸಿದಾಗ ಅವರ ಹಾಡಿನ ಸಾಧನೆ ಅವರ ಪ್ರಾಣಕ್ಕಿಂತಲೂ ಮುಖ್ಯವೆಂಬುದು ಸ್ಪಷ್ಟವಾಗುತ್ತಿತ್ತು. ಅಂದರೆ ಅವರ ಪ್ರಾಣಕ್ಕಿಂತಲೂ ಹೆಚ್ಚು ಅವರು ತಮ್ಮ ಗಾನ ವಿದ್ಯೆಗೆ ಮಹತ್ವ ಕೊಟ್ಟಿದ್ದರು.

ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ಹಾಡಿದ ಶ್ರೇಷ್ಠ ಸಾಧನೆಗಾಗಿ ಪದ್ಮಭೂಷಣ, ಪದ್ಮಶ್ರೀ, ನಾಲ್ಕು ಭಾಷೆಗಳಲ್ಲಿ 6 ರಾಷ್ಟ್ರೀಯ ಪ್ರಶಸ್ತಿ ಪಡೆದ ಏಕೈಕ ಗಾಯಕರಾದ ಶ್ರೇಷ್ಠ ಸಾಧನೆ ಇವರದಾಗಿದೆ. ಹಲವು ವಿಶ್ವ ವಿದ್ಯಾಲಯಗಳು ಎಸ್.ಪಿ.ಬಿಯವರಿಗೆ ಗೌರವ ಡಾಕ್ಟರೇಟ್ ನೀಡಿ ತಮ್ಮ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಿಕೊಂಡಿವೆ. ವಿಶ್ವವಿದ್ಯಾಲಯದಿಂದ ಕೆಲವರಿಗೆ ಗೌರವ ಹೆಚ್ಚಿದರೆ ಇನ್ನೂ ಕೆಲವು ಸಾಧಕರಿಂದ ವಿಶ್ವವಿದ್ಯಾಲಯಕ್ಕೇನೆ ಗೌರವ ಹೆಚ್ಚುತ್ತದೆ. ಗೌರವ ಡಾಕ್ಟರೇಟ್, ಪದ್ಮಭೂಷಣ, ಪದ್ಮಶ್ರೀ, ಪದವಿ - ಪ್ರಶಸ್ತಿಗಳನ್ನು ಎಸ್.ಪಿ.ಬಿ ಅವರು ಸ್ವೀಕರಿಸಿದ್ದರಿಂದ ಪ್ರಶಸ್ತಿಗಳ ಹಿರಿಮೆ ಹೆಚ್ಚಿಸಿದ್ದಾರೆ.

ಎಸ್.ಪಿ.ಬಿ ಹಾಡಲು ನಿಂತರೆ ಲೈವ್ ಕಾರ್ಯಕ್ರಮ ಅನಿಸುತ್ತಿರಲಿಲ್ಲ. ಬಹಿರಂಗ ಕಾರ್ಯಕ್ರಮಗಳಲ್ಲಿಯೂ ಕೂಡ ರೆಕಾರ್ಡಿಂಗ್ ಮಾಡಿದಂತೆ ಹಾಡುತ್ತಿದ್ದುದು ಅವರ ಶಿಷ್ಟ ಗುಣ. ಎಸ್.ಪಿ.ಬಿಯವರು ಲೈವ್ ಹಾಡುತ್ತಿದ್ದರೆ ಸಾವಿರಾರು ಜನ ಮಂತ್ರ ಮುಗ್ಧರಾಗಿ ಕೇಳುತ್ತಿದ್ದರು. ಎಸ್.ಪಿ.ಬಿಯವರಿಗೆ ವಿಶೇಷವಾಗಿ ರೆಕಾರ್ಡಿಂಗ್ ಜಾಗಕ್ಕೆ ಹೋಗಿ ಹಾಡು ಹಾಡಿ, ರೆಕಾರ್ಡಿಂಗ್ ಮಾಡಬೇಕು ಎಂದು ಅನಿಸುತ್ತಿರಲಿಲ್ಲ. ಅಂದರೆ ಸಾವಿರಾರು ಜನರ ಮಧ್ಯೆಯೇ ಅಷ್ಟು ನಿಶಬ್ಧ ವಾತಾವರಣವನ್ನು ತಮ್ಮ ಹಾಡಿನ ಮೂಲಕ ಸೃಷ್ಟಿಸುವ ವಾತಾವರಣ ಎಸ್.ಪಿ.ಬಿಯವರಿಗೆ ಸಿದ್ಧಿಸಿದ ಕಲೆಯಾಗಿತ್ತು. ಅದರೊಳಗೆ ಎಲ್ಲರ ಮನಸ್ಸನ್ನು ಸೆರೆಡಿಯ ಬಲ್ಲೆ ಎಂಬ ಆತ್ಮವಿಶ್ವಾಸ ಎಸ್.ಪಿ.ಬಿಯವರದಾಗಿತ್ತು. ಯಾವ ರಂಗದ ಹಾಡುಗಳನ್ನು ಹಾಡಲು ನಿಂತರೂ ಅವರ ಭಾವನೆ ರಂಗದಲ್ಲಿ ರಂಗೇರಿಬಿಡುತ್ತಿತ್ತು. ಭಾವ ಗೀತೆಗಳನ್ನು ಹಾಡಿದರೆ ಭರ್ತೃ ಹರಿಯ ನೀತಿಶತಕ ಮೈದಾಳಿ ನಿಲ್ಲುತ್ತಿತ್ತು. ಪ್ರೇಮ ಗೀತೆಗಳನ್ನು ಹಾಡಿದರೆ ಭರ್ತೃಹರಿಯ ಶೃಂಗಾರ ಶತಕ ನೃತ್ಯ ಮಾಡುತ್ತಿತ್ತು. ಭಕ್ತಿ ಗೀತೆಗಳನ್ನು ಹಾಡಲು ನಿಂತರೆ ವೈರಾಗ್ಯ ಶತಕ ನಭೋ ಮಂಡಲವನ್ನೇ ತುಂಬಿರುತ್ತಿತ್ತು. ಅಂತಹ ಭಾವನಾತ್ಮಕ ಹಾಡುಗಾರರಾದ ಎಸ್.ಪಿ.ಬಿಯವರು ಕೋಟಿಗೊಬ್ಬರು.

ಎಸ್.ಪಿ.ಬಿಯವರು 50 ವರುಷಗಳ ನಿರಂತರ ನಿಲ್ಲದ ಗಾಯನ, ಗಂಧರ್ವ ಎಂಬ ಪದವೇ ಸರ್ವ ಕಲೆಗಳ ಸಾಗರ. ಅಂದರೆ ಒಂದೇ ಕಲೆಯಲ್ಲಿ ಸರ್ವ ಕಲೆಯನ್ನು ಕಾಣುವ ಏಕೈಕ ಗಂಧರ್ವ ಲೋಕವೆಂದರೆ ಅದು ಸಂಗೀತ. ಅವರು ಬಾಲಕರಾಗಿ ಹಾಡುತ್ತಿದ್ದರು, ಯುವಕರ ಧ್ವನಿಯಲ್ಲಿ ಹಾಡುತ್ತಿದ್ದರು, ವೃದ್ಧರ ಧ್ವನಿಯಲ್ಲಿಯೂ ಹಾಡುತ್ತಿದ್ದರು, ಆಗ ತಾನೇ ಹುಟ್ಟಿದ ಮಗುನ ಧ್ವನಿಯನ್ನು ತಮ್ಮ ಗಂಟಲಿನಲ್ಲಿಯೇ ಕ್ರಿಯಾತ್ಮಕಗೊಳಿಸುವ ಕಲೆ ಅವರದಾಗಿತ್ತು. ಹೆಣ್ಣಿನ ಧ್ವನಿಯಲ್ಲಿ ಹಾಡಲು ನಿಂತರೆ ಹೆಣ್ಣಿನ ಧ್ವನಿಯೇ ನಾಚುತ್ತಿತ್ತು. ಅಂತಹ ಬಹುಮುಖ ಧ್ವನಿಗೆ ಏಕ ಧ್ವನಿಯನ್ನು ನಿಮಿತ್ಯ ಮಾಡಿದ ಸಾಧಕರಲ್ಲಿ ಇವರು ಒಬ್ಬರು. ನಾಸಿಕದ ಮೂಲಕ ಹಾಡುವ ಕಲೆಯೂ ಇವರಿಗೆ ಕರಗತವಾಗಿತ್ತು.

ಬಾಯಿ ತೆರೆಯದೇ ಗಂಟಲು ಹಾಗೂ ನಾಸಿಕ ಮಧ್ಯೆ ಆಲಾಪ ಮಾಡಲು ನಿಂತರೆ ನಮ್ಮ ಕಣ್ಣೆದುರಿಗೆ ಅವರು ನಿಂತು ಆಲಾಪ ಮಾಡುತ್ತಿದ್ದರೂ ಈ ಆಲಾಪ ಯಾರದೆಂದು ಸುತ್ತಲೂ ನೋಡುವ ವಾತಾವರಣವನ್ನು ಸೃಷ್ಟಿಸುತ್ತಿದ್ದರು. ಆಕಾಶವಾಣಿ ಎಂಬುದು ನಮ್ಮ ಕಣ್ಣೆದುರಿಗೆ ವ್ಯಕ್ತಿ ಇಲ್ಲದ ಕೇವಲ ಧ್ವನಿ ಮಾತ್ರ. ನಮ್ಮ ಕಿವಿಗೆ ಕೇಳುವಂತೆ ನಮ್ಮೆದುರಿಗೆ ನಿಂತೇ ಆಲಾಪ ಮಾಡಿ ಆಕಾಶವಾಣಿಗೆ ಸೆಡ್ಡು ಹೊಡೆಯುವ ಕಲೆಗಾರನೀತ. ಎಸ್.ಪಿ.ಬಿಗೆ ಎಸ್.ಪಿ.ಬಿನೇ ಸರಿ ಸಾಟಿಯಾಗಿ ನಿಲ್ಲುತ್ತಾರೆ.

ಎಸ್.ಪಿ.ಬಿಯವರು ಮುಂದಿನ ಜನ್ಮವೊಂದಿದ್ದರೆ ಅದು ಕನ್ನಡಿಗನಾಗಿ ಹುಟ್ಟುವಂತೆ ಭಗವಂತನಲ್ಲಿ ಪ್ರಾರ್ಥಿಸಿದ ಭಾವ ಏನು ಇದೆಯಲ್ಲಾ ಆ ಭಾವನೆ ಕನ್ನಡಿಗರು ಬೆಲೆ ಕಟ್ಟಲಾರದ ಪ್ರೀತಿ, ಪ್ರೇಮ, ವಿಶ್ವಾಸದ ವಿನಿಮಯವಾಗಿತ್ತು. ಕನ್ನಡ ಒಂದನ್ನು ಹೊರತುಪಡಿಸಿ, ಎಲ್ಲಾ ಭಾಗದವರು ಇವರೊಂದಿಗೆ ವ್ಯವಹಾರಿಕವಾಗಿ ಮಾತ್ರ ನಡೆದುಕೊಂಡರು. ಆದರೆ ಕನ್ನಡಿಗರು ಮಾತ್ರ ಎಸ್.ಪಿ.ಬಿಯವರನ್ನು ಮನೆಯ ಮಗನಂತೆ ಕಂಡರು. ಹೀಗಾಗಿ ಎಸ್.ಪಿ.ಬಿಯವರು ನಿರ್ಭಯವಾಗಿ ಕನ್ನಡಿಗರನ್ನು ಮುಕ್ತ ಕಂಠದಿಂದ ಗುಣಗಾನ ಮಾಡಿದರು. ಕನ್ನಡಕ್ಕೂ ಹಾಗೂ ಕನ್ನಡಿಗರಿಗೂ ಅವರು ಕೊಟ್ಟ ಗೌರವ, ಪ್ರೀತಿ, ವಿಶ್ವಾಸದಿಂದ ತುಂಬಿತ್ತು.

ಸಾಧನೆ ಎಂಬುದು ಯಾರೊಬ್ಬರ ಸ್ವತ್ತಲ್ಲ, ಅದು ಸಾಧಕನ ಸ್ವತ್ತು. ಇಂತಹ ಉದಾಹರಣೆಗಳು ನಮಗೆ ಬೇಕಾದಷ್ಟು ಸಿಗುತ್ತವೆ. ಎಸ್.ಪಿ.ಬಿಯವರು ಪರಭಾಷಿಕ ವ್ಯಕ್ತಿಯಾಗಿದ್ದರೂ ತನ್ನ ಸಾಧನೆಯ ಮೂಲಕ ಸಾಹಸದ ಏಣಿಯನ್ನು ಏರಿ ಕನ್ನಡಿಗರ ಮನ ಗೆದ್ದರು ಮತ್ತು ತಾವೇ ಕನ್ನಡಿಗರಾದರು! ಕೇವಲ ಕನ್ನಡಿಗರಾಗಲಿಲ್ಲ ತಮ್ಮ ಗಾನ ಕಲೆಯನ್ನೇ ಕನ್ನಡೀಕರಣಗೊಳಿಸಿದರು. ಮನುಷ್ಯನ ಭಾವನೆಯೂ ಸದ್ಭಾವನೆಯಿಂದ ಕೂಡಿದ್ದರೆ ಆ ಸಂಕಲ್ಪ ಕ್ರಿಯಾತ್ಮಕಗೊಳ್ಳುತ್ತದೆ. ಹೀಗಾಗಿ ಎಸ್.ಪಿ.ಬಿಯವರು ಸಂಕಲ್ಪ ಪೂರ್ವಕವಾಗಿ 'ಮರು ಜನ್ಮದಲ್ಲಿ ಕನ್ನಡ ನಾಡಿನಲ್ಲಿ ಹುಟ್ಟುತ್ತೇನೆ' ಎಂದು ಭಾವಿಸಿದುದರ ಪರಿಣಾಮವಾಗಿ, ಕನ್ನಡ ಕುವರನಾಗಿ, ಹುಟ್ಟಿ ಬರಲಿ ಎಂದು ನಾವೆಲ್ಲರೂ ಪ್ರಾರ್ಥಿಸೋಣ.